ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

26

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಪಂಚ ರಾಜ್ಯಗಳ ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ          ದಿನಾಂಕ : DATE : 7/4/21

# ಪಂಚ ರಾಜ್ಯಗಳ ಚುನಾವಣೆ; ಮತದಾನ ಯಶಸ್ವಿ

**ದೆಹಲಿ:** ಕೇರಳ, ತಮಿಳುನಾಡು ಮತ್ತು ಪುದುಚೇರಿ ವಿಧಾನಸಭಾ ಚುನಾವಣೆಗೆ ಮಂಗಳವಾರ ಒಂದೇ ಹಂತದಲ್ಲಿ ಮತದಾನ ನಡೆದಿದ್ದು, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಮೂರನೇ ಹಂತದ ಮತದಾನ ಯಶಸ್ವಿಯಾಗಿದೆ.

ಕೇರಳದಲ್ಲಿ ಶೇ.73.40, ಅಸ್ಸಾಂನಲ್ಲಿ ಶೇ.82.28, ಪುದುಚೇರಿಯಲ್ಲಿ ಶೇ.77.87, ತಮಿಳುನಾಡಿನಲ್ಲಿ ಶೇ.71.79 ಹಾಗೂ ಪಶ್ಚಿಮ ಬಂಗಾಳದಲ್ಲಿ ಶೇ 84.21ರಷ್ಟು ಮತದಾನವಾಗಿದೆ. ಕೇರಳದಲ್ಲಿ 140 ಕ್ಷೇತ್ರಗಳ 40,771 ಮತಗಟ್ಟೆಗಳಲ್ಲಿ 2.74 ಕೋಟಿ ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಸಂಜೆ 6ರಿಂದ 7ರ ವರೆಗೂ ಕೋವಿಡ್-19 ರೋಗಿಗಳಿಗೆ ಹಾಗೂ ಸೋಂಕಿನಿಂದಾಗಿ ಪ್ರತ್ಯೇಕ ವಾಸದಲ್ಲಿದ್ದವರು ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಒಟ್ಟು 957 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಒಟ್ಟು ಮತದಾನದ ಪೈಕಿ ಶೇ.73.69ರಷ್ಟು ಪುರುಷರು, ಶೇ.73.48 ಮಹಿಳೆಯರು ಹಾಗೂ ಶೇ.37.37ರಷ್ಟು ಲೈಂಗಿಕ ಅಲ್ಪಸಂಖ್ಯಾತ ಮತದಾರರು ಮತದಾನ ಮಾಡಿದ್ದಾರೆ.

| | |
|---|---|
| ಕೇರಳ | 73.40% |
| ಪ.ಬಂಗಾಳ | 84.21% |
| ಅಸ್ಸಾಂ | 82.28% |
| ಪುದುಚೇರಿ | 77.87% |
| ತಮಿಳುನಾಡು | 71.79% |



ತಮಿಳುನಾಡಿನ ಅರವಕುರಿಚಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಅಣ್ಣಾಮಲೈ ಅವರು ಮತ ಚಲಾಯಿಸಿದರು.